**ಡಿ.ಡಬ್ಲ್ಯೂ-1**

(ಸಾಕ್ಷಿಯನ್ನು ದಿನಾಂಕ 19-07-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.)

**ಪಾಟೀ ಸವಾಲುಃ 6 ನೇ ಪ್ರತಿವಾದಿ ಪರ ಶ್ರೀ ಎಮ್ ಎಲ್ ಎನ್ ವಕೀಲರಿಂದಃ**

4 ನೇ ಪ್ರತಿವಾದಿಯು 3 ನೇ ಪ್ರತಿವಾದಿಯ ಮಗ. 3 ಮತ್ತು 4 ನೇ ಪ್ರತಿವಾದಿಯರು ಬ ಪರಿಶಿಷ್ಟದ 2 ಮತ್ತು 5 ನೇ ಸ್ವತ್ತುಗಳನ್ನು 6 ನೇ ಪ್ರತಿವಾದಿಗೆ ನೊಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಈಗ ಬಗ್ಗೆ ಮೊದಲು ಗೊತ್ತಿರಲಿಲ್ಲ ಈಗ ಗೊತ್ತಾಗಿದೆ. ನಾವು ತಕರಾರು ಮಾಡಿದ್ದರು ಮಾರಾಟ ಮಾಡಿದ್ದಾರೆ. ಈ ಬಗ್ಗೆ ಪಂಚಾಯಿತಿ ಆರ್ ಐ ರವರ ಮುಂದೆ ತಕರಾರು ಸಹ ಕೊಟ್ಟಿದ್ದೇವೆ. ಸದರಿ ತಕರಾರನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ. 3 ಮತ್ತು 4 ನೇ ಪ್ರತಿವಾದಿಯವರ ಭಾಗವನ್ನು 6 ನೇ ಪ್ರತಿವಾದಿಗೆ ಕೊಡಲು ನಿಮ್ಮದು ತೊಂದರೆ ಇದೆಯಾ ಎಂದರೆ ನಮ್ಮ ಅಜ್ಜಿ ನಮಗೆ ವಿಲ್ ಬರೆದಿರುವುದರಿಂದ 3 ಮತ್ತು 4 ನೇ ಪ್ರತಿವಾದಿಗೆ ಆಸ್ತಿಯಲ್ಲಿ ಯಾವುದೇ ಭಾಗ ಇಲ್ಲ ಎಂದು ನುಡಿಯುತ್ತಾರೆ. ಸದಿರಿ ವಿಲ್ ನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ. ನಮ್ಮ ಅಜ್ಜಿ ವಿಲ್ ಬರೆಯುವ ಮೊದಲೇ 3 ಮತ್ತು 4 ನೇ ಪ್ರತಿವಾದಿಗಳು ಸದರಿ ಸ್ವತ್ತನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ. ಮಾರಾಟ ಆಗುವ ಕಾಲಕ್ಕೆ ಸದರಿ ಸ್ವತ್ತುಗಳು 3 ಮತ್ತು 4 ನೇ ಪ್ರತಿವಾದಿಯವರ ಹೆಸರಿನಲ್ಲಿ ಇದ್ದವು ಎಂದರೆ ಸರಿ. 6 ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ವಾದಿ ಪರ ವಕೀಲರು ಗೈರು ಹಾಜರಾಗಿದ್ದು, ಪಾಟೀ ಸವಾಲು ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**